# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಎಂ. ಸುರೇಶ್, ಕರವಸೂಲಿಗಾರ, ಎಲೆತೋಟದಹಳ್ಳಿ ಗ್ರಾಮ ಪಂಚಾಯತಿ, ಚನ್ನಪಟ್ಟಣ ತಾಲ್ಲೂಕು, ಇವರನ್ನು ವಜಾಗೊಳಿಸಿರುವ ಆದೇಶವನ್ನು ರದ್ದುಪಡಿಸಿರುವ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ರಾಮನಗರ ಇವರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

**ಓದಲಾಗಿದೆ:**

1. ಪಂಚಾಯತಿ ಅಭಿವೃದ್ಧಿ ಅಧಿಕಾರಿ, ವೈ.ಟಿ.ಹಳ್ಳಿ ಗ್ರಾಮ ಪಂಚಾಯಿತಿ ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ, ಇವರ ಕಚೇರಿ ಆದೇಶ ದಿನಾಂಕ: 20.11.2014
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ, ಇವರ ಆದೇಶ ದಿನಾಂಕ: 10.06.2015.
3. ಹಿಂದಿನ ಅಧ್ಯಕ್ಷರು ಹಾಗೂ ಸದಸ್ಯರುಗಳು ಎಲೆತೋಟದಹಳ್ಳಿ ಗ್ರಾಮ ಪಂಚಾಯಿತಿ, ಇವರುಗಳು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿ ದಿನಾಂಕ: 29.06.2015.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/49/ಗ್ರಾಪಂಸಿ/2015, ದಿನಾಂಕ: 29.12.2015.

**ಪ್ರಸ್ತಾವನೆ**

ಶ್ರೀ ಎಂ. ಸುರೇಶ್, ಕರವಸೂಲಿಗಾರ, ಎಲೆತೋಟದಹಳ್ಳಿ ಗ್ರಾಮ ಪಂಚಾಯತಿ, ಚನ್ನಪಟ್ಟಣ ತಾಲ್ಲೂಕು, ಇವರು ಪದೇ ಪದೇ ಕಛೇರಿಗೆ ಹಾಜರಾಗದೆ ಗೈರು ಹಾಜರಾಗುತ್ತಿರುವುದು, ತೆರಿಗೆ ವಸೂಲಾತಿ ಪ್ರಮಾಣದಲ್ಲಿ ಪ್ರಗತಿ ಇಲ್ಲದಿರುವುದು, ವಸೂಲಾದ ತೆರಿಗೆಯನ್ನು ನಿಗದಿತ ಸಮಯದಲ್ಲಿ ಗ್ರಾಮ ಪಂಚಾಯತಿ ಖಾತೆಗೆ ಜಮೆ ಮಾಡದೆ ಹಣ ದುರುಪಯೋಗ ಮಾಡುತ್ತಿರುವುದು, ಗ್ರಾಮ ಪಂಚಾಯತಿ ಸದಸ್ಯರೊಂದಿಗೆ ಸೌಹಾರ್ದತೆಯಿಂದ ನಡೆದುಕೊಳ್ಳದಿರುವುದು, ಗ್ರಾಮ ಪಂಚಾಯತಿಯ ಬೀದಿ ದೀಪ, ನೀರು ನಿರ್ವಹಣೆ, ಶೌಚಾಲಯಗಳ ಪ್ರಗತಿ ಹಾಗೂ ಕಾಮಗಾರಿಗಳ ಉಸ್ತುವಾರಿಗೆ ನಿರ್ಲಕ್ಷ್ಯ ತೋರಿಸಿರುವುದು, ಗ್ರಾಮ ಪಂಚಾಯತಿಗೆ ಬರುವ ಸಾರ್ವಜನಿಕರಿಂದ ಲಂಚದ ಬೇಡಿಕೆ ಇಡುವುದು ಹಾಗೂ ಅವರ ಮೇಲೆ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳ ಕುರಿತಂತೆ ನ್ಯಾಯಾಲಯಕ್ಕೆ ಹಾಜರಾಗಿ ಕಛೇರಿ ಹಾಜರಾತಿಯಲ್ಲಿ ಸಹಿ ಮಾಡುತ್ತಿರುವುದು ಇತ್ಯಾದಿ ಆರೋಪಗಳ ಹಿನ್ನೆಲೆಯಲ್ಲಿ ಸದರಿಯವರನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 113(3) ಅಡಿಯಲ್ಲಿ ಎಲೆತೋಟದಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಗ್ರಾಮ ಪಂಚಾಯಿತಿ ಕಚೇರಿಯ ಆದೇಶದಲ್ಲಿ ಸೇವೆಯಿಂದ ವಜಾಗೊಳಿಸಲಾಗಿತ್ತು.

ಸದರಿ ವಜಾ ಆದೇಶದ ವಿರುದ್ಧ ಶ್ರೀ. ಎಂ. ಸುರೇಶ್ ರವರು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ನಿಯಮ 113(4)ರ ಅನುಸಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ರಾಮನಗರ ಇವರಿಗೆ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯನ್ನು ಪರಿಗಣಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದಿನಾಂಕ:15.11.2014ರಂದು ಗ್ರಾಮ ಪಂಚಾಯತಿಯು ತೆಗೆದುಕೊಂಡ ನಿರ್ಣಯದ ವಿಷಯ ಸಂಖ್ಯೆ 05ನ್ನು ರದ್ದು ಪಡಿಸಿ ಶ್ರೀ. ಎಂ. ಸುರೇಶ್ ರವರನ್ನು ಕರವಸೂಲಿಗಾರ ಹುದ್ದೆಯಲ್ಲಿ ಮುಂದುವರೆಸಲು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಆದೇಶದಲ್ಲಿ ಆದೇಶಿಸಿರುತ್ತಾರೆ.

ಈ ಆದೇಶದ ವಿರುದ್ಧ ಸದರಿ ಗ್ರಾಮ ಪಂಚಾಯಿತಿಯ ಹಿಂದಿನ ಅಧ್ಯಕ್ಷರು ಹಾಗೂ ಸದಸ್ಯರುಗಳು ಸರ್ಕಾರಕ್ಕೆ ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಮೇಲ್ಮನವಿ ಸಲ್ಲಿಸಿದ್ದು ಸರ್ಕಾರವು ವಿಚಾರಣೆಯನ್ನು ಬಾಕಿ ಇರಿಸಿ ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಆದೇಶದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ.

ವಾದಿಗಳು ಮತ್ತು ಪ್ರತಿವಾದಿಗಳಿಗೆ ಮೇಲ್ಮನವಿ ವಿಚಾರಣೆಗೆ ಹಾಜರಾಗಲು ದಿನಾಂಕ: 31.12.2015, 19.01.2016, 06.09.2016, 04.11.2016 04.01.2017, 13.01.2017, 27.02.2017. ನೋಟೀಸುಗಳನ್ನು ಜಾರಿಗೊಳಿಸಲಾಗಿರುತ್ತದೆ.

1. ದಿನಾಂಕ:26-10-2016, 18-02-2017 ಮತ್ತು 25-02-2017 ರಂದು ಮೇಲ್ಮನವಿಯಲ್ಲಿ ಮೊದಲನೇ ಪ್ರತಿವಾದಿಯಾದ ಶ್ರೀ ಎಂ. ಸುರೇಶ್, ಕರವಸೂಲಿಗಾರ, ಇವರು ತಮ್ಮ **ವಕೀಲರಾದ ಶ್ರೀ ಶಂಕರೇಗೌಡ,** ಇವರ ಮುಖಾಂತರ ಮೇಲ್ಮನವಿ ಅರ್ಜಿಗೆ ಈ ಕೆಳಗಿನಂತೆ ಲಿಖಿತ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

i) ಶ್ರೀ ಎಂ. ಸುರೇಶ್, ಕರವಸೂಲಿಗಾರ, ಇವರು ದಿನಾಂಕ:29-01-2005 ರಲ್ಲಿ ಎಲೆತೋಟದಹಳ್ಳಿ ಗ್ರಾಮ ಪಂಚಾಯತಿಯಲ್ಲಿ, ಪಂಚಾಯತ್ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕರವಸೂಲಿಗಾರರಾಗಿ ನೇಮಕವಾಗಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ.

ii) ಸೇವೆಯಿಂದ ವಜಾ ಮಾಡುವ ಮುನ್ನ ಕಾರಣ ಕೇಳುವ ನೋಟೀಸ್ ಆಗಲಿ, ಇಲಾಖಾ ವಿಚಾರಣೆಗೆ ಒಳಪಡಿಸದೆ ದಿನಾಂಕ:15-11-2014 ರ ಪಂಚಾಯತಿ ಸಭೆಯಲ್ಲಿ ತೀರ್ಮಾನಿಸಿ ಸೇವೆಯಿಂದ ವಜಾಗೊಳಿಸಲಾಗಿದೆ.

iii) 2ನೇ ಪ್ರತಿವಾದಿಯಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಸಾಮಾನ್ಯ ಸಭೆಯಲ್ಲಿ ಸರ್ಕಾರದ ಆದೇಶ 20-06-2003 ರ ನಿರ್ದೇಶಗಳನ್ವಯ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರೂ ವಜಾಗೊಳಿಸಲು ನಿರ್ಧರಿಸಲಾಗಿದೆ.

iv) ಗ್ರಾಮ ಪಂಚಾಯತಿ ಮಾಡಿರುವ ವಜಾ ಕ್ರಮವನ್ನು ಕುರಿತು ಪ್ರತಿವಾದಿಯು ಮೇಲ್ಮನವಿ ಪ್ರಾಧಿಕಾರವಾದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರಿಗೆ ಮೇಲ್ಮನವಿ ಸಲ್ಲಿಸಿದ್ದು, ಮೇಲ್ಮನವಿ ವಿಚಾರಣೆ ನಡೆಸಿದ ಪ್ರಾಧಿಕಾರಿಯು, ಗ್ರಾಮ ಪಂಚಾಯತಿಯು ಸೂಕ್ತ ಪ್ರಕ್ರಿಯೆಗಳನ್ನು ಪಾಲಿಸದೆ ಕಾರಣ ಕೇಳುವ ನೋಟೀಸ್‌ಗಳನ್ನು ಜಾರಿ ಮಾಡದೆ ವಜಾ ಮಾಡಿರುವ ಕ್ರಮವು ನಿಯಮಬಾಹಿರವಾಗಿರುವುದಾಗಿ ತಿಳಿಸಿ ಗ್ರಾಮ ಪಂಚಾಯತಿಯ ಆದೇಶವನ್ನು ರದ್ದುಗೊಳಿಸಿ ಸೇವೆಯಲ್ಲಿ ಮುಂದುವರೆಯಲು ಆದೇಶ ಮಾಡಲಾಗಿರುತ್ತದೆ.

v) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 14 ಗ್ರಾಪಂಸಿ 2002, ದಿನಾಂಕ:20-06-2003 ರನ್ವಯ ಪಾಲಿಸಿ ಕ್ರಮ ಕೈಗೊಂಡಿರುವುದಿಲ್ಲ.

vi) ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸುವ ಕುರಿತು ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಠರಾವು ಪಾಸು ಮಾಡಿರುವುದಿಲ್ಲವೆಂದು ಆಕ್ಷೇಪಣೆ ಮಾಡಿರುತ್ತಾರೆ.

vii) ಅಧ್ಯಕ್ಷರ ಹುದ್ದೆಯ ಅವಧಿಯು ದಿನಾಂಕ:05-05-2015 ಕ್ಕೆ ಕೊನೆಗೊಂಡಿರುತ್ತದೆ. ದಿನಾಂಕ:29-06-2015 ರಲ್ಲಿ ರಾಜ್ಯ ಚುನಾವಣಾ ಆಯೋಗವು ಗ್ರಾಮ ಪಂಚಾಯತಿಗಳ ಚುನಾವಣೆ ನಡೆಸಿ ಹೊಸ ಗ್ರಾಮ ಪಂಚಾಯತಿಯು ಅಸ್ತಿತ್ವಕ್ಕೆ ಬಂದಿರುತ್ತದೆ. ಆದ್ದರಿಂದ ಹಿಂದಿನ ಅಧ್ಯಕ್ಷರು ಮೇಲ್ಮನವಿ ಸಲ್ಲಿಸಲು ಅವಕಾಶ ಇಲ್ಲದಿದ್ದರೂ ಆಕ್ಷೇಪಣೆ ಮಾಡಿರುತ್ತಾರೆ.

viii) ಪ್ರತಿವಾದಿಗಳ ವಿರುದ್ಧ ಯಾವುದೇ ಆರೋಪ ಪಟ್ಟಿ ಮಾಡದೆ, ಇಲಾಖಾ ವಿಚಾರಣೆ ಮಾಡದೆ ಕ್ರಮ ಕೈಗೊಳ್ಳಲಾಗಿರುತ್ತದೆ.

ix) ಗ್ರಾಮ ಪಂಚಾಯತಿ ಕ್ರಮವು ರಾಜಕೀಯ ದುರುದ್ದೇಶದಿಂದ ಕೂಡಿದ್ದು, ಉದ್ದೇಶ ಪೂರ್ವಕವಾಗಿ ಕ್ರಮ ವಹಿಸಲಾಗಿರುತ್ತದೆ.

ಈ ಮೇಲಿನ ಎಲ್ಲಾ ಆಕ್ಷೇಪಣೆಗಳನ್ನು ಗಮನಿಸಿದಾಗ ಪ್ರತಿವಾದಿಯನ್ನು ವಜಾ ಮಾಡಿರುವುದು ದುರುದ್ದೇಶದ ಕ್ರಮವಾಗಿದೆ ಮತ್ತು ಯಾವುದೇ ಸಾಕ್ಷ್ಯಧಾರಗಳು ಇರುವುದಿಲ್ಲ ಮತ್ತು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಕ್ರಮವಹಿಸಲಾಗಿದೆ ಎಂದು ಆಕ್ಷೇಪಣೆ ಮಾಡುತ್ತಾ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರು ಮಾಡಿರುವ ಆದೇಶವನ್ನು ಎತ್ತಿ ಹಿಡಿದು, ಮೇಲ್ಮನವಿ ಪ್ರಾಧಿಕಾರವು ಹೊರಡಿಸಿರುವ ತಡೆಯಾಜ್ಞೆಯನ್ನು ತೆರವುಗೊಳಿಸಿ(ಸರ್ಕಾರ) ಪ್ರತಿವಾದಿಯನ್ನು ಮರು ನೇಮಕ ಮಾಡಲು ಅವಕಾಶ ನೀಡುವಂತೆ ನೈಸರ್ಗಿಕ ನ್ಯಾಯ ಮತ್ತು ನ್ಯಾಯ ಸಮ್ಮತವಾಗಿ ಆದೇಶ ನೀಡುವಂತೆ ಕೋರಿರುತ್ತಾರೆ.

2. ಮೇಲ್ಮನವಿ ಸಲ್ಲಿಸಿರುವ ಅಂದಿನ ಅಧ್ಯಕ್ಷರು ಮತ್ತು ಇತರ ಗ್ರಾಮ ಪಂಚಾಯತ್ ಸದಸ್ಯರು, ಎಲೆತೋಟದಹಳ್ಳಿ ಗ್ರಾಮ ಪಂಚಾಯತಿ, ಇವರು ದಿನಾಂಕ: 15-12-2016 ರಂದು ತಮ್ಮ **ವಕೀಲರಾದ ಶ್ರೀ. ಎಸ್.ಎಸ್ ನಾಗರಾಜ್** ರವರ ಮುಖಾಂತರ ಮೇಲ್ಮನವಿ 1ನೇ ವಾದಿದಾರರ ಪರವಾಗಿ ಸಲ್ಲಿಸಿರುವ ಆಕ್ಷೇಪಣೆಗಳು ಈ ಕೆಳಗಿನಂತಿರುತ್ತದೆ.

i) ಶ್ರೀ.ಎಂ.ಸುರೇಶ್ ಕರವಸೂಲಿಗಾರರು ಇವರಿಗೆ ಕರ್ತವ್ಯದಲ್ಲಿ ನಿಯಾಮಾನುಸಾರ ಕ್ರಮಕೈಗೊಳ್ಳಲು ಮತ್ತು ನಿಷ್ಟೆಯಿಂದ ಕಾರ್ಯನಿರ್ವಹಿಸಲು ದಿನಾಂಕ: 07.10.2013 ರಿಂದ 15.11.2014ರವರೆಗೆ ಅವಕಾಶವನ್ನು ನೀಡಲಾಗಿದೆ.

ii) ಶ್ರೀಯುತರು ಕರ್ತವ್ಯದಲ್ಲಿ ಯಾವುದೇ ಬದಲಾವಣೆ ಹೊಂದದ ಕಾರಣ ಇವರಿಗೆ ಕಾರಣ ಕೇಳಿ ನೋಟೀಸನ್ನು ದಿನಾಂಕ:03.11.2014 ರಿಂದ ಕಾರಣ ಕೇಳಿ ನೋಟೀಸನ್ನು ಜಾರಿ ಮಾಡಲಾಯಿತು.

iii) ಇವರ ಕರ್ತವ್ಯ ನಿರ್ಲಕ್ಷ್ಯತೆ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತ್ ಸಾಮಾನ್ಯ ಸಭೆಯ ದಿನಾಂಕ: 15-11-2014 ರಲ್ಲಿ ಶ್ರೀ.ಎಂ.ಸುರೇಶ್ ಕರವಸೂಲಿಗಾರ ಇವರನ್ನು ಸೇವೆಯಿಂದ ವಜಾಗೊಳಿಸಲು ತೀರ್ಮಾನಿಸಲಾಗಿರುತ್ತದೆ.

iv) ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿವಂತೆ ಸದರಿ ನೌಕರರನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಲೆತೋಟದಹಳ್ಳಿ ಗ್ರಾಮ ಪಂಚಾಯತಿ ರವರು ದಿನಾಂಕ:20-11-2014 ರಂದು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕಲ್ಂ 113(3) ರನ್ವಯ ಸೇವೆಯಿಂದ ವಜಾಗೊಳಿಸಿ ಆದೇಶ ಹೊರಡಿಸಿದ್ದಾರೆ.

v) ಶ್ರೀ.ಎಂ.ಸುರೇಶ್ ಕರವಸೂಲಿಗಾರ ಇವರನ್ನು ಕಾನೂನು ಬದ್ಧವಾಗಿ ವಜಾಗೊಳಿಸಲಾಗಿದೆ. ಇವರು ಗ್ರಾಮ ಪಂಚಾಯಿತಿಯಲ್ಲಿ ಸ್ಥಳಿಯ ನೌಕರ/ಪಂಚಾಯತ್ ವತಿಯಿಂದ ನೇಮಕಗೊಂಡ ನೌಕರನಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮಗಳು ಇವರ ಪ್ರಕರಣದಲ್ಲಿ ಅನ್ವಯಿಸುವುದಿಲ್ಲ. ಇವರಿಗೆ **ಗ್ರಾಮ ಪಂಚಾಯಿತಿಯೆ ಶಿಸ್ತು ಪ್ರಾಧಿಕಾರ** ಆಗಿರುತ್ತದೆ.

vi) ಪ್ರತಿವಾದಿಯು ದಾಖಲಿಸಿರುವ ಆಕ್ಷೇಪನೆಗಳು ನ್ಯಾಯಸಮ್ಮತವಾಗಿರುವುದಿಲ್ಲ. ಚುನಾಯಿತ ಪ್ರತಿನಿಧಿಗಳು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಒಮ್ಮತದ ಮೇರೆಗೆ ವಜಾಗೊಳಿಸಲಾಗಿರುತ್ತದೆ.

vii) 1ನೇ ಪ್ರತಿವಾದಿಯು ತಪ್ಪು ಮತ್ತು ಅತಿರಿಕ್ತ ಆಕ್ಷೇಪಣೆ ಮಾಡಿರುವ ಬಗ್ಗೆ ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ನಮೂದಿಸಿರುವುದರಿಂದ ಸತ್ಯಾಂಶವಿರುವುದಿಲ್ಲ.

viii) 1ನೇ ಪ್ರತಿವಾದಿಯು ಗ್ರಾಮ ಪಂಚಾಯಿಯಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳ ಪಾಲನೆಯನ್ನು ನಿರ್ವಹಿಸುವಲ್ಲಿ ವಿಫಲವಾಗಿರುತ್ತಾರೆ ಮತ್ತು ಕರವಾಸೂಲಿಯಲ್ಲಿ ಭೌತಿಕ ಗುರಿ ಸಾಧಿಸಿರುವುದಿಲ್ಲ.

ix) ವಸತಿ ಯೋಜನೆಗಳ ಮೇಲಾಧಿಕಾರಿಗಳಿಗೆ ಸೂಕ್ತ ಮಾಹಿತಿ ನೀಡದೇ ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಕಾರಣರಾಗಿರುತ್ತಾರೆ.

x) 2ನೇ ಪ್ರತಿವಾದಿಗಳ ವಿರುದ್ಧ ಲೋಕಾಯುಕ್ತ ಇಲಾಖೆಯಲ್ಲಿ ದೂರು ದಾಖಲಿಸಿದ್ದು ಸಿ.ಸಿ.ಎ ನಿಯಮ 14(ಎ) ರಂತೆ ಇಲಾಖಾ ವಿಚಾರಣೆ ನಡೆಸಲು ಆದೇಶವಾಗಿರುತ್ತದೆ.

xi) 1ನೇ ಪ್ರತಿವಾದಿಯಾದ ಎಂ. ಸುರೇಶ್ ರವರು ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಯಾಗಿ FIR ದಾಖಲೆಯಾಗಿದೆ. ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ ಕಛೇರಿಗೆ ಗೈರುಹಾಜರು ಹಾಗಿರುತ್ತಾರೆ. ಆದರೆ ಹಾಜರಿ ಪುಸ್ತಕದಲ್ಲಿ ಸಹಿ ಮಾಡಿರುತ್ತಾರೆ. ಇದು ಕೂಡ ಸಾಮಾನ್ಯ ಸಭೆಯಲ್ಲಿ ಚರ್ಚೆಯಾಗಿರುತ್ತದೆ.

xii) ಮೊದಲನೇ ಪ್ರತಿವಾದಿಯು ವಜಾ ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ 3ನೇ ಪ್ರತಿವಾದಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 13(4) ರನ್ವಯ ಮೇಲ್ಮನವಿ ಸಲ್ಲಿಸಲು ಅವಕಾಶವಿರುತ್ತದೆ.

xiii) 1ನೇ ಪ್ರತಿವಾದಿಯು 3ನೇ ಪ್ರತಿವಾದಿಯವರಿಗೆ ವಜಾಗೊಳಿಸಿರುವ ಶಿಕ್ಷೆಯ ಬಗ್ಗೆ ಮೇಲ್ಮನವಿ ದಾಖಲಿಸಿರುತ್ತಾರೆ. ಮೇಲ್ಮನವಿ ಸ್ವೀಕರಿಸಿದ ಸಿ.ಇ.ಓ ರವರು ಗ್ರಾಮ ಪಂಚಾಯತ್ ಆದೇಶವನ್ನು ರದ್ದು ಪಡಿಸಿರುತ್ತಾರೆ.

xiv) 3ನೇ ಪ್ರತಿವಾದಿಯ ನೀಡಿರುವ ಆದೇಶವನ್ನು ರದ್ದುಗೊಳಿಸಲು ಸರ್ಕಾರದಲ್ಲಿ ವಾದಿ ಇವರು ಮೇಲ್ಮನವಿ ದಾಖಲಿಸಿರುತ್ತಾರೆ.

xv) 3ನೇ ಪ್ರತಿವಾದಿಗಳಾದ ಸಿ.ಇ.ಓ ಇವರು ಕರವಸೂಲಿಗಾರರಾದ ಎಂ. ಸುರೇಶ್ ಮತ್ತು ಅಂದಿನ ಪಿ.ಡಿ.ಓ ರವರು ತಪ್ಪು ಪ್ರಮಾಣ ಪತ್ರ ಸಲ್ಲಿಸಿರುವುದಾಗಿ ನಡವಳಿ ಪುಸ್ತಕದಲ್ಲಿ ಷರ/ಟಿಪ್ಪಣಿಯನ್ನು ಸೂಕ್ತವಾಗಿ ಪರಿಶೀಲಿಸದೆ 1ನೇ ಪ್ರತಿವಾದಿ ಪರವಾಗಿ ಆದೇಶ ನೀಡಿರುತ್ತಾರೆ.

xvi) 1ನೇ ಪ್ರತಿವಾದಿಯು ಸಿ.ಇ.ಓ ಆದೇಶದಂತೆ ಕರ್ತವ್ಯದಲ್ಲಿ ಮುಂದುವರೆಯಲು ಆದೇಶ ನೀಡಬೇಕಾಗಿ ಸಲ್ಲಿಸಿರುವ ಬೇಡಿಕೆ ನಿಯಮಕ್ಕೆ ವ್ಯತಿರಿಕ್ತವಗಿರುತ್ತದೆ.

xvii) ದಾಖಲೆಗಳನ್ನು ಭೌತಿಕವಾಗಿ ಪರಿಶೀಲಿಸದೇ ಎಂ.ಸುರೇಶ್ ಪರವಾಗಿ ನೀಡಿರುವ ಆದೇಶ ನ್ಯಾಯ ಸಮ್ಮತವಾಗಿಲ್ಲದ ಕಾರಣ ಆ ಆದೇಶವನ್ನು ಪುರಸ್ಕರಿಸಲು ಸಲ್ಲಿಸಿರುವ ಮನವಿಯನ್ನು ರದ್ದುಗೊಳಿಸಬೇಕಾಗಿ ವಾದಿಗಳ ಪರ ಮನವಿಮಾಡಿರುತ್ತಾರೆ.

xviii) 1ನೇ ಪ್ರತಿವಾದಿಯು ತಮ್ಮ ಮೇಲೆ ತಪ್ಪು ಆರೋಪಗಳನ್ನು ರಾಜಕೀಯ ಪ್ರಭಾವದಿಂದ ಪ್ರೇರೆಪಿತ ಶಿಫಾರಸ್ಸಿನೊಂದಿಗೆ ಮತ್ತು ಗ್ರಾಮ ಪಂಚಾಯಿತಿಯ ದ್ವೇಷ ಮನೋಭಾವದಿಂದ ಆರೋಪಗಳನ್ನು ತಯಾರಿಸಿ ತಪ್ಪು ಪ್ರಕರಣಗಳನ್ನು ಸರ್ಕಾರದಲ್ಲಿ ಹಾಗೂ ಆರಕ್ಷಕ ಠಾಣೆಗಳಲ್ಲಿ ನೋಂದಾಯಿಸಿರುವುದಾಗಿ ತಿಳಿಸಿದ್ದು ಈ ಕುರಿತು ಯಾವುದೇ ಪೂರಕ ದಾಖಲೆಗಳ ಸಾಕ್ಷ್ಯಾಧಾರಗಳನ್ನು ನೀಡಲು ವಿಫಲರಾಗಿರುತ್ತಾರೆ.

xix) 1ನೇ ಪ್ರತಿವಾದಿಯು ತಮ್ಮ ಮೇಲೆ ಮಾಡಿರುವ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸದೆ ನಿಯಮಬಾಹಿರವಾಗಿ ಕ್ರಮವಹಿಸಲಾಗಿದೆ ಎಂದು ತಿಳಿಸಿರುತ್ತಾರೆ. ಇದನ್ನು ಅಲ್ಲಗೆಳೆಯುತ್ತ 1ನೇ ಪ್ರತಿವಾದಿಯು ಸ್ಥಳಿಯ ನೌಕರನಾಗಿರುವುದರಿಂದ ಸಿವಿಲ್ ಸೇವಾ ನಿಯಮಗಳು ಅನ್ವಯಿಸುವುದಿಲ್ಲ. ಆದರೆ 1ನೇ ಪ್ರತಿವಾದಿಗೆ ಕಾರಣ ಕೇಳುವ ನೋಟೀಸು ನೀಡುವ ಮೂಲಕ ಸೂಕ್ತ ಅವಕಾಶ ನೀಡಿ ಸೂಕ್ತ ಕ್ರಮ ಕೈಗೊಳ್ಳಲಾಗಿರುತ್ತದೆ.

xx) 1ನೇ ಪ್ರತಿವಾದಿಗಳ ವಿರುದ್ಧ ಆರಕ್ಷಕ ಠಾಣೆಯಲ್ಲಿ FIR ದಾಖಲೆಯಾಗಿದ್ದು ಮತ್ತು ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ವಾದವನ್ನು ಮಂಡಿಸಿರುವುದು ದೃಢಪಟ್ಟಿರುತ್ತದೆ.

xxi) 1ನೇ ಪ್ರತಿವಾದಿಯು ಪಂಚಾಯತ್ ಮಂಡಳಿಯವರ 2012-13ನೇ ಸಾಲಿನಿಂದ 2014-15ನೇ ಸಾಲಿನವರೆಗೆ ಗ್ರಾಮ ಪಮಚಯಿತಿಯಲ್ಲಿ ಕರ್ತವ್ಯ ನಿರ್ವಹಿಸಿರುವ ಕುರಿತು. ಸಾರ್ವಜನಿಕರಿಂದ ನೀಡಲಾದ ದೂರು ಅರ್ಜಿಗಳನ್ನು ಪರಿಶೀಲಿಸಿ ಮತ್ತು ಸಾರ್ವಜನಿಕರಿಂದ ಲಂಚದ ಬೇಡಿಕೆ ಇಡುವುದನ್ನು ಗಮನಿಸಲಾಗಿದೆ. ಹಾಗೂ ಅಕ್ರಮವಾಗಿ ಅವರೇ ಸ್ವತಃ ಕಾಮಗಾರಿಗಳನ್ನು ನಿರ್ವಹಿಸಿರುವುದು, ಸ್ವಜನ ಪಕ್ಷಪಾತದಿಂದ ವರ್ತಿಸುವುದು ಹಾಗೂ ಶೌಚಾಲಯ ನಿರ್ಮಾಣದಲ್ಲಿ ಎಸಗಿರುವ ಅಕ್ರಮಗಳ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗಿರುತ್ತದೆ.

xxii) ಒಂದನೇ ಪ್ರತಿವಾದಿಗೆ ಸಾಮಾನ್ಯ ಸಭೆಯ ನಿರ್ಣಾಯದನ್ವಯ ನಿಯಮಾನುಸಾರ ನೋಟೀಸ್ ಜಾರಿಗೊಳಿಸಿದ್ದು, ಇದಕ್ಕೆ ಸದರಿಯವರು ಸಮಜಾಯಿಸಿ ಉತ್ತರ ನೀಡದಿದ್ದ ಕಾರಣ ಪಂಚಾಯತ್ ರಾಜ್ ಅಧಿನಿಯಮ್ಮದನ್ವಯ ಕ್ರಮ ವಹಿಸಿ ವಜಾಗೊಳಿಸಲಾಗಿರುತ್ತದೆ.

xxiii) ಈ ಎಲ್ಲಾ ಮೇಲೆ ತಿಳಿಸಿರುವ ಅಂಶಗಳಿಂದ 1ನೇ ಪ್ರತಿವಾದಿ ಪರ ಸಲ್ಲಿಸಿರುವ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷ್ಯಧಾರಗಳಿಲ್ಲದೆ ಕಾರಣ 3ನೇ ಪ್ರತಿವಾದಿಯು ಮಾಡಿರುವ ಆದೇಶವನ್ನು ರದ್ದುಗೊಳಿಸುವಂತೆಯು ಮತ್ತು

ದಿನಾಂಕ:15-11-2014 ರ ಗ್ರಾಮ ಪಂಚಾಯತಿಯ ಠರಾವಿನಲ್ಲಿ ನಿರ್ಣಯಿಸಿರುವಂತೆ ಗ್ರಾಮ ಪಂಚಾಯತಿ ಪಿಡಿಓ ರವರು ಶ್ರೀ ಎಂ. ಸುರೇಶ್, ರವರನ್ನು ವಜಾಗೊಳಿಸಿರುವ ಆದೇಶವನ್ನು ಎತ್ತಿ ಹಿಡಿಯುವಂತೆ ಮನವಿ ಮಾಡಿರುತ್ತಾರೆ.

ಈ ಸಂಬಂಧ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ನ್ಯಾಯಾಲಯದಲ್ಲಿ ದಿನಾಂಕ: 24.09.2016, 09.02.2017 ಮತ್ತು 18.02.2017 ರಂದು ವಿಚಾರಣೆ ನಡೆಸಲಾಗಿದೆ. ಅರ್ಜಿದಾರರು ಮತ್ತು ಎದುರುದಾರರುಗಳ ಪರವಾಗಿ ಅವರ ವಕೀಲರುಗಳು ಲಿಖಿತ ಹೇಳಿಕೆಗಳನ್ನು ಸಲ್ಲಿಸಿ ತಮ್ಮ ವಾದವನ್ನು ಮಂಡಿಸಿರುತ್ತಾರೆ. ಸರ್ಕಾರವು ಸದರಿ ಪ್ರಕರಣದಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳನ್ನು, ಎಲ್ಲಾ ಹೇಳಿಕೆಗಳನ್ನು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಪರಿಶೀಲಿಸಿ ದಿನಾಂಕ 29.12.2015 ರಂದು ನೀಡಿದ ಆದೇಶವನ್ನು ರದ್ದುಪಡಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಮಗನರ ಜಿಲ್ಲೆ ರವರು ದಿನಾಂಕ 29.12.2014 ರಂದು ನೀಡಿರುವ ಆದೇಶವನ್ನು ಎತ್ತಿಹಿಡಿಯಲು ನಿರ್ಧರಿಸಿದೆ. ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 49 ಗ್ರಾಪಂಸಿ 2015, ಬೆಂಗಳೂರು, ದಿನಾಂಕ: 26.02.2018</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಂ. ಸುರೇಶ್, ಕರವಸೂಲಿಗಾರ, ಎಲೆತೋಟದಹಳ್ಳಿ ಗ್ರಾಮ ಪಂಚಾಯತಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ ಇವರನ್ನು ಸೇವೆಯಲ್ಲಿ ಮುಂದುವರೆಸಿ ಆದೇಶಿಸಿರುವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮಗನರ ಜಿಲ್ಲೆ ಇವರ ದಿನಾಂಕ 10.06.2015 ರ ಆದೇಶಕ್ಕೆ ತಡೆಯಾಜ್ಞೆ ನೀಡಿದ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 49 ಗ್ರಾಪಂಸಿ 2015 ನ್ನು ರದ್ದುಗೊಳಿಸಿ ಶ್ರೀ ಎಂ. ಸುರೇಶ್, ಕರವಸೂಲಿಗಾರ ಇವರನ್ನು ಸೇವೆಯಲ್ಲಿ ಮುಂದುವರೆಸಿ ಆದೇಶಿಸಿರುವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮಗನರ ಜಿಲ್ಲೆ ಇವರ ದಿನಾಂಕ 10.06.2015 ರ ಆದೇಶವನ್ನು ಎತ್ತಿಹಿಡಿದಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

26/2/18

(ಎಂ.ಕೆ. ಕೆಂಪೇಗೌಡ)
ನಿರ್ದೇಶಕರು(ಪಂ.ರಾಜ್-I) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಮನಗರ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚನ್ನಪಟ್ಟಣ, ರಾಮನಗರ ಜಿಲ್ಲೆ.
3. ಅಧ್ಯಕ್ಷರು, ಎಲೆತೋಟದಹಳ್ಳಿ ಗ್ರಾಮ ಪಂಚಾಯತಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.
4. ಪಂಚಯತಿ ಅಭಿವೃದ್ಧಿ ಅಧಿಕಾರಿ, ಎಲೆತೋಟದಹಳ್ಳಿ ಗ್ರಾಮ ಪಂಚಾಯತಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.
5. ಶ್ರೀ ಎಂ. ಸುರೇಶ್, ಕರವಸೂಲಿಗಾರ, ಎಲೆತೋಟದಹಳ್ಳಿ ಗ್ರಾಮ ಪಂಚಾಯತಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.